<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u> ಶ್ರೀರಂಗಪಟ್ಟಣ.

ಸಿ.ಸಿ.ಃ 378/2018

ಪಿ. ಡಬ್ಲ್ಯುಃ 01

ಸಿ. ಡಬ್ಲ್ಯುಃ 01

ಸಾಕ್ಷಿದಾರರ ಹೆಸರು : ಮಾದೇಗೌಡ
ತಂದೆ/ಪತಿಯ ಹೆಸರು : ಬೋರೇಗೌಡ
ವಯಸ್ಸು : 48 ವರ್ಷ
ವೃತ್ತಿ : ಗಾರೆ ಕೆಲಸ
ವಾಸ : ಮಂಟಿ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

26.10.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಆರೋಪಿ ಗೊತ್ತು. ದಿಃ14.04.2018 ರಂದು ರಾತ್ರಿ 08.30-9.00 ಗಂಟೆ ಸಮಯದಲ್ಲಿ ನಾನು ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿದ್ದೆ. ಆಗ ಆರೋಪಿ ನಾಯಿಯನ್ನು ಹಿಡಿದುಕೊಂಡು ಬಂದು ನಮ್ಮ ಮನೆಯ ಮುಂದೆ ಗಲೀಜು ಮಾಡಿಸುತ್ತಿದ್ದರು. ಆಗ ನಾನು ಏಕೆ ನಮ್ಮ ಮನೆಯ ಮುಂದೆ ಗಲೀಜು ಮಾಡಿಸುತ್ತಿಯಾ ನಮಗೆ ತೊಂದರೆ ಆಗುತ್ತದೆ ಎಂದು ಪ್ರಶ್ನೆ ಮಾಡಿದೆ. ಆಗ ಆರೋಪಿ ನನ್ನನ್ನು ಬಾಯಿಗೆ ಬಂದಂತೆ ಬೈದು ಅಲ್ಲೇ ಬಿದಿದ್ದ ಕಲ್ಲಿನಿಂದ ನನ್ನ ಹಣೆಗೆ , ತುಟಿಗೆ ಹೊಡೆದನು. ಆತ ಹೊಡೆದಿದ್ದರಿಂದ ನನ್ನ ಒಂದು ಹಲ್ಲು ಮುರಿದು ಹೋಯಿತು. ಅಲ್ಲೇ ಪಕ್ಕದಲ್ಲಿದ್ದ ರಮೇಶ್ ರವರು ಬಂದು ಜಗಳ ಬಿಡಿಸಿರುತ್ತಾರೆ. ಅದೇ ದಿನ ರಾತ್ರಿ ನಾನು ಕೆ.ಆರ್. ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಮರುದಿನ ಬೆಳಿಗ್ಗೆ 08.30 ರಿಂದ 09.00 ಗಂಟೆ ಸಮಯದಲ್ಲಿ ಕೆ.ಆರ್.ಸಾಗರ ಪೋಲೀಸ್ ಠಾಣೆಗೆ ಹೋಗಿ ದೂರನ್ನು ಬರೆಸಿಕೊಟ್ಟಿರುತ್ತೇನೆ. ಸಾಕ್ಷಿ ಒಂದು ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1.ಎ. ಎಂದು ಗುರುತಿಸಲಾಯಿತು. ನಂತರ ಮರುದಿನ ಬೆಳಿಗ್ಗೆ ಪೋಲೀಸಿನವರು ಘಟನೆ ನಡೆದ ಸ್ಥಳಕ್ಕೆ ಬಂದು ನನ್ನ ಕಡೆಯಿಂದ ಶರ್ಟ್ ಅನ್ನು ಮತ್ತು ಆರೋಪಿ ನೀಡಿದ ಕಲ್ಲು ಅನ್ನು ವಶಪಡಿಸಿಕೊಂಡರು. ಘಟನೆ ನಡೆದ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿದ್ದೇನೆ. ಸಾಕ್ಷಿಯು ಅಮಾನತ್ತು ಮಹಜರ್

ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅಮಾನತ್ತು ಮಹಜರ್ ಅನ್ನು ನಿಪಿ.2 ಎಂದು ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ.2.ಎ. ಎಂದು ಗುರುತಿಸಲಾಯಿತು. ಪೋಲೀಸನವರು ಅಮಾನತ್ತು ಪಡಿಸಿಕೊಂಡಿದ್ದ ಶರ್ಟ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಶರ್ಟ್ ಹಾಗೂ ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು. ಮಾಲು.1 ಮತ್ತು 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸುವಂತೆ ಹಾಗೂ ಪಾಟಿ ಸವಾಲು ಮಾಡಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ಪುರಸ್ಕರಿಸಿದೆ)

## ಪಾಟಿ ಸವಾಲು ಮಾನ್ಯ ಸ.ಸ.ಅ ಅವರಿಂದ

ಗಲಾಟೆ ನಡೆದ ದಿನಾಂಕಃ 12.04.2018 ರಂದು ಅಂದರೆ ನಿಜ. ಸಮಯ ರಾತ್ರಿ 09.00 ಗಂಟೆ ಆಗಿತ್ತು ಎಂದರೆ ನಿಜ. ಅದೇ ದಿನ ನಾನು ಚಿಕಿತ್ಸೆ ಪಡೆದು ದಿಃ13.04.2018 ರಂದು ಠಾಣೆಗೆ ಹೋಗಿ ರಾತ್ರಿ 08.20 ಗಂಟೆ ಸಮಯದಲ್ಲಿ ದೂರು ನೀಡಿದ್ದೇನೆ ಎಂದರೆ ನಿಜ. ದಿಃ14.04.2018 ರಂದು ಪೋಲೀಸನವರು ಕೃತ್ಯ ನಡೆದ ಸ್ಥಳಕ್ಕೆ ಬಂದು ಬೆಳಿಗ್ಗೆ 08.30 ರಿಂದ 09.00 ಗಂಟೆ ವರೆಗೆ ಸ್ಥಳ ಮಹಜರು ಮಾಡಿದ್ದಾರೆ ಎಂದರೆ ನಿಜ. ಸದರಿ ಸಮಯದಲ್ಲಿ ಉಮಾಶಂಕರ್ ಹಾಗೂ ರಮೇಶ್ ಸಹ ಹಾಜರಿದ್ದರು ಎಂದರೆ ನಿಜ.

## ಪಾಟಿ ಸವಾಲು ಮಾನ್ಯ ಆರೋಪಿ ಪರ ವಕೀಲರಿಂದ

ನನ್ನ ಮನೆಯಲ್ಲಿ ನಾನು ಮತ್ತು ನನ್ನ ಮೂರು ಮಕ್ಕಳು ವಾಸವಿದ್ದೇವೆ. ನನ್ನ ಮಕ್ಕಳು ಚಿಕ್ಕ ವಯಸ್ಸಿನವರು. ನಮ್ಮ ಮನೆಯ ಪಕ್ಕ ರಾಮಶೆಟ್ಟಿ ಹಾಗೂ ಕೃಷ್ಣಪ್ಪ ರವರ ಮನೆಯಿದ್ದು ಅಲ್ಲಿ ಕೃಷ್ಣಪ್ಪ ನವರ ಚಿಲ್ಲರೆ ಅಂಗಡಿ ಸಹ ಇರುತ್ತದೆ ಎಂದರೆ ನಿಜ. ಆರೋಪಿ ಮೂಲತಃ ಬೆಂಗಳೂರಿನವರು. ನನಗೆ ಬಿ.ಜೆ.ಪಿ. ಮಹದೇವು ಎನ್ನುವವರು ಪರಿಚಯ ಇರುತ್ತಾರೆ. ನನ್ನ ಮನೆಯಿಂದ ಸುಮಾರು ಐದು ಮನೆಗಳನ್ನು ಬಿಟ್ಟು ಮಹದೇವು ರವರಿಗೆ ಸೇರಿದ ಮಹದೇಶ್ವರ ಲಾಡ್ಜ್ ಇರುತ್ತದೆ ಎಂದರೆ ನಿಜ. ಅರೋಪಿ ತನ್ನ ಮನೆಯಲ್ಲಿ ಪೇಪರ್ ಪ್ಲೇಟ್ ಅನ್ನು

ಮಿಷನ್ ಇಟ್ಟುಕೊಂಡು ತಯಾರಿಸುತ್ತಾರೆ ಎಂದರೆ ಸರಿಯಲ್ಲ. ನನ್ನ ಮನೆಯಿಂದ ಬೆಳಗೊಳ ಗ್ರಾಮ 02-2.50 ಕಿ.ಮಿ ದೂರ ಇರಬಹುದು. ನನ್ನ ಮನೆಯಿಂದ ಕೆ.ಆರ್.ಸಾಗರ ಗ್ರಾಮ ಸುಮಾರು 6-6.5 ಕಿ.ಮಿ ದೂರ ಇದೆ. ನನ್ನ ಮನೆಯಿಂದ ಮೇಟಗಳ್ಳಿ ಸುಮಾರು 3-4 ಕಿ.ಮಿ ದೂರದಲ್ಲಿದೆ. ಆರೋಪಿಯ ಹೆಸರು ನನಗೆ ಗೊತ್ತಿರಲಿಲ್ಲ ಗಲಾಟೆ ಆದ ಮೇಲೆ ಆತನ ಹೆಸರು ತಿಳಿದುಕೊಂಡಿರುತ್ತೇನೆ. ಮೇಟಗಳ್ಳಿಯಲ್ಲಿ , ಕೆ.ಆರ್.ಎಸ್ ಗ್ರಾಮದಲ್ಲಿ ಹಾಗೂ ಬೆಳಗೊಳ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ನಿಜ. ಕೆ.ಆರ್.ಆಸ್ಪತ್ರೆ ನನ್ನ ಮನೆಯಿಂದ ಸುಮಾರು 10 ಕಿ.ಮಿ ಅಂತರದಲ್ಲಿದೆ ಎಂದರೆ ನಿಜ. ಆರೋಪಿ ನನಗೆ ಬೈದಿದ್ದ ಬಗ್ಗೆ ನಾನು ನನ್ನ ದೂರಿನಲ್ಲಿ ತಿಳಿಸಿದ್ದೇನೆ. ನಾನು ಆಸ್ಪತ್ರೆಗೆ ನನ್ನ ಚಿಕ್ಕ ಮಗನನ್ನು ಕರೆದುಕೊಂಡು ಹೋಗಿದ್ದೆ. ನಾನು ಚಿಕಿತ್ಸೆ ಪಡೆಯುವಾಗ ವೈದ್ಯರಿಗೆ ಕಲ್ಲಿನಿಂದ ಹಲ್ಲೆ ಮಾಡಿದ್ದರಿಂದ ಗಾಯ ವಾಯಿತು ಎಂದು ತಿಳಿಸಿರುತ್ತೇನೆ. ನಾನು ದೂರು ಕೊಡುವ ಸಮಯದಲ್ಲಿ ನನ್ನ ಹಲ್ಲು ಮುರಿದಿದ್ದ ಬಗ್ಗೆ ತಿಳಿಸಿರುತ್ತೇನೆ. ನಾನು ದೂರು ಕೊಡುವ ಸಮಯದಲ್ಲಿ ನನ್ನ ಚೈನು ಬಿದ್ದು ಹೋದ ಬಗೆಗ ಬರೆಸಿರುವುದಿಲ್ಲ. ಪೋಲೀಸರು ಸ್ಥಳ ಮಹಜರ್ ಗೆ ಬಂದ ಕಾಲಕ್ಕೆ ನನ್ನ ಮುರಿದಿದ್ದ ಹಲ್ಲನ್ನು ಅಮಾನತ್ತು ಪಡೆಸಿಕೊಂಡಿಲ್ಲ. ನನ್ನ ಮೇಲ್ಭಾಗದ ಹಲ್ಲು ಮುರಿದಿತ್ತು. ಮಹಜರ್ ಗೆ ಬಂದ ಕಾಲಕ್ಕೆ ಆರೋಪಿ ಸ್ಥಳದಲ್ಲಿದ್ದ. ರಮೇಶ್ ರವರ ಮನೆ ನಮ್ಮ ಮನೆಯ ಪಕ್ಕದಲ್ಲಿರುತ್ತದೆ. ಮಹಜರ್ ನಲ್ಲಿ ಏನು ಬರೆದರು ಎಂದು ನನಗೆ ಗೊತ್ತಿಲ್ಲ. ಬಿ.ಜೆ.ಪಿ. ಮಹದೇವು ತಮ್ಮ ಲಾಡ್ಜ್ ನಲ್ಲಿ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದರು ಅದರ ಮಾಹಿತಿಯನ್ನು ಆರೋಪಿ ಪೋಲೀಸರಿಗೆ ನೀಡಿದ್ದ ಕಾರಣ ನಾನು ಮತ್ತು ಸದರಿ ಮಹದೇವು ಷರೀಕಾಗಿ ಆರೋಪಿಯ ವಿರುದ್ಧ ಯಾವುದೇ ಘಟನೆ ನಡೆಯದಿದ್ದರೂ ಸಹಿತ ಪ್ರಭಾವ ಬೀರಿ ಸುಳ್ಳು ಕೇಸ ಅನ್ನು ದಾಖಲು ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಕಾರಣ ನನಗೆ ಓದಲು ಬರುವುದಿಲ್ಲ. ಗಲಾಟೆ ಸಮಯದಲ್ಲಿ ನನ್ನ ಶರ್ಟ್ ಮತ್ತು ಬನಿಯನ್ ಗೆ ರಕ್ತವಾಗಿತ್ತು. ಪೋಲೀಸರು ಶರ್ಟ್ ಅನ್ನು ಅಮಾನತ್ತು ಪಡಿಸಿಕೊಂಡರು ಮತ್ತು ಬನಿಯನ್ ಅನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಘಟನೆ ನಡೆಯಿತು ಎಂದು ಹೇಳಿದ ಸಮಯದಲ್ಲಿ ಯಾವುದೇ ಜಲ್ಲಿಕಲ್ಲುಗಳ ಗುಡ್ಡೆ ನನ್ನ ಮನೆಯ ಹತ್ತಿರ ಇರಲಿಲ್ಲ. ಮನೆಯ ಕೆಲಸ ಮಾಡುತ್ತಿದ್ದರಿಂದ ಚಪ್ಪಡಿ ಕಲ್ಲುಗಳು ಇದ್ದವು. ನಮ್ಮ ಮನೆಯ ಮುಂದೆ ಬೀದಿ ದೀಪ ಇರುತ್ತದೆ. ನಾನು ಮನೆಗೆ ಬರುವ ಕಾಲದಲ್ಲಿ ಚಪ್ಪಡಿ ಕಲ್ಲು ಅನ್ನು ಎಡವಿ ಬಿದ್ದು ನನ್ನ ತುಟಿಗೆ ಗಾಯ ಮಾಡಿಕೊಂಡಿದ್ದೆ

ಎಂದರೆ ಸರಿಯಲ್ಲ. ರಮೇಶ್ ಮತ್ತು ಉಮಾಶಂಕರ್ ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನನ್ನ ಮತ್ತು ಆರೋಪಿಯ ನಡುವೆ ನಡೆದಿಲ್ಲ ಪೋಲೀಸರು ಯಾವುದೇ ಸ್ಥಳ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತು ಗಳನ್ನು ವಶಪಡಿಸಿಕೊಂಡಿಲ್ಲ ಆದರೂ ಕೂಡ ಆರೋಪಿಯ ವಿರುದ್ದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.